# THE KARNATAKA CIVIL SERVICES (TYPISTS AND JUNIOR ASSISTANTS / SECOND DIVISION ASSISTANTS (CHANGE OF CADRE) RULES, 1964.

**(As amended upto 31st December 1988)**

**GENERAL ADMINISTRATION DEPARTMENT**

**NOTIFICATION**

**Bangalore, dated 26th September 1964.**

In exercise of the powers conferred by the proviso to Article 309 of the Constitution and with the previous approval of the Government of India as required by the proviso to sub-section (7) of Section 115 of the State Re-organisation Act, 1956 (Central Act 37 of 1956), the Governor of Karnataka hereby makes the following Rules, namely:-

**1. Title.-** These rules may be called the Karnataka Civil Services (Typists and Junior Assistants / Second Division Assistants) (Change of Cadre) Rules, 1964.

**2. Change of Cadre.-** Notwithstanding anything in the rules of recruitment specially made in respect of any service.

(i) a Typists possessing the qualifications prescribed for the post of Junior Assistants / Second Division Assistants may change his cadre to that of a Junior Assistant / Second Division Assistant, as the case may be, and

(ii) a Junior Assistant / Second Division Assistant possessing the qualifications prescribed for the post of Typist may change his cadre to that of Typist, provided that no person shall be eligible to change his cadre unless he has put in not less than five years of service excluding the period of probation* or officiation and the period of service if any, rendered by him as a local candidate in the cadre of Typists or as the case may be Junior Assistant / Second Division Assistant.

**3. Procedure.-** (1) Persons desiring to change their cadre under rule 2 shall make an application to the authority who appointed them requesting for the change of cadre.

(2) On receipt of the application under sub-rule (1), the appointing authority may if satisfied that the applicant is entitled to change the cadre pass orders granting the request.

**4. Permission to be granted only once.-** No Government servant shall be permitted to change his cadre under rule 2 more than once.

****"5. Effect of change of cadre.-** (1) Notwithstanding anything contained in the Karnataka Government Servant's (Seniority) Rules, 1957 or any other rules and except as provided in sub-rule (2), a person who has been permitted to change his cadre under rule 2 shall be entitled to count his previous service for purposes of leave, pension and seniority.

Provided that,-

(a) he shall not be entitled to count for seniority his previous service rendered as a local candidate; and

(b) in the case of a Typist (other than an allottee under the States' Reorganisation Act, 1956) who has changed his cadre to that of Junior Assistant or Second Division Assistant a further period of two years shall be excluded from the previous service for the purpose of seniority in the changed cadre.

(2) A person who has been permitted to change his cadre under rule 2 shall not be considered for promotion unless he has put in service of at least one year in the changed cadre and such person shall not have any claim for seniority or for promotion to the next higher cadre over persons who are promoted before he becomes eligible for promotion".

By order and in the name of the Government of Karnataka,

(SYED ZAHEERUDDIN HASSAN)
Under Secretary to Government,
General Administration Department(O and M)

(*) (Inserted Vide Notification No. DPAR 65 SCR 81, dated 12th October, 1982).

(**) Inserted Vide Notification No. DPAR 42 SCR 85, dated 12th August 1986.

**ಕರ್ನಾಟಕ ಸಿವಿಲ್ ಸೇವಾ (ಬೆರಳಚ್ಚುಗಾರರು ಮತ್ತು ಕಿರಿಯ ಸಹಾಯಕರುಗಳು, ದ್ವಿತೀಯ ದರ್ಜೆ ಸಹಾಯಕರುಗಳ ) (ಉದ್ಯೋಗಿವೃಂದದ ಬದಲಾವಣೆ) ನಿಯಮಗಳು, 1964.**

**(1988 ರ ಡಿಸೆಂಬರ್ 31 ರವರೆಗೆ ತಿದ್ದುಪಡಿಯಾದಂತೆ)**

**ಸಾಮಾನ್ಯಾಡಳಿತ ಇಲಾಖೆ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 26ನೇ ಸೆಪ್ಟೆಂಬರ್ 1964**

ಸಂವಿಧಾನದ 309ನೇ ಪರಂತುಕದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು 1956ರ ರಾಜ್ಯ ಪುನಸ್ಸಂಘಟನಾ ಅಧಿನಿಯಮ (1956ರ ಕೇಂದ್ರ ಅಧಿನಿಯಮ 37)ದ 115ನೇ ಪ್ರಕರಣದ (7)ನೇ ಉಪ ಪ್ರಕರಣದ ಪರಂತುಕದಿಂದ ಅಗತ್ಯಪಡಿಸಿದಂತೆ ಭಾರತ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ನಿಯಮಗಳನ್ನು ಈ ಮೂಲಕ ರಚಿಸುತ್ತಾರೆ ಎಂದರೆ:-

**1. ಹೆಸರು.-** ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಬೆರಳಚ್ಚುಗಾರರು ಮತ್ತು ಕಿರಿಯ ಸಹಾಯಕರುಗಳು ದ್ವಿತೀಯ ದರ್ಜೆ ಸಹಾಯಕರುಗಳ) (ಉದ್ಯೋಗಿ ವೃಂದದ ಬದಲಾವಣೆ) ನಿಯಮಗಳು, 1964 ಎಂದು ಕರೆಯತಕ್ಕದ್ದು.

**2.** ಉದ್ಯೋಗಿ ವೃಂದದ ಬದಲಾವಣೆ:- ಯಾವುದೇ ಸೇವೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಲಾದ ನೇಮಕಾತಿ ನಿಯಮಗಳಲ್ಲಿ ಏನೇ ಇದ್ದರೂ

(i) ಕಿರಿಯ ಸಹಾಯಕರುಗಳ / ದ್ವಿತೀಯ ದರ್ಜೆ /ಸಹಾಯಕರುಗಳ ಹುದ್ದೆಗಾಗಿ ಗೊತ್ತುಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರುವ ಒಬ್ಬ ಬೆರಳಚ್ಚುಗಾರನು ತನ್ನ ಉದ್ಯೋಗಿ ವೃಂದವನ್ನು ಸಂದರ್ಭಾನುಸಾರವಾಗಿ ಕಿರಿಯ ಸಹಾಯಕ / ದ್ವಿತೀಯ ದರ್ಜೆ ಸಹಾಯಕನಾಗಿ ಬದಲಾವಣೆ ಮಾಡಿಕೊಳ್ಳಬಹುದು.

(ii) ಬೆರಳಚ್ಚುಗಾರರ ಹುದ್ದೆಗಾಗಿ ಗೊತ್ತುಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರುವ ಒಬ್ಬ ಕಿರಿಯ ಸಹಾಯಕ / ದ್ವಿತೀಯ ದರ್ಜೆ /ಸಹಾಯಕನು ತನ್ನ ಉದ್ಯೋಗಿ ವೃಂದವನ್ನು ಬೆರಳಚ್ಚುಗಾರನಾಗಿ ಬದಲಾವಣೆ ಮಾಡಿಕೊಳ್ಳಬಹುದು. ಆದರೆ, ಅವನು ಬೆರಳಚ್ಚುಗಾರ ಅಥವಾ ಕಿರಿಯ ಸಹಾಯಕ / ದ್ವಿತೀಯ ದರ್ಜೆ ಸಹಾಯಕ * ಮತ್ತು ಸ್ಥಳೀಯ ಅಭ್ಯರ್ಥಿಯಾಗಿ ತಾನು ಸಲ್ಲಿಸಿದ ಸೇವೆ ಯಾವುದಾದರೂ ಇದ್ದರೂ ಆ ಸೇವಾ ಅವಧಿಯನ್ನು ಉದ್ಯೋಗಿ ವೃಂದದಲ್ಲಿ ಅರ್ಹತಾ ಪರೀಕ್ಷಾವಧಿ ಅಥವಾ ಸ್ಥಾನಾಪನ್ನ ಅವಧಿಯನ್ನು ಹೊರತುಪಡಿಸಿ, ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿದ್ದ ಹೊರತು, ಅವನ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಲು ಅರ್ಹನಾಗಿರತಕ್ಕುದಲ್ಲ.

**3. ಕಾರ್ಯವಿಧಾನ**.- (1) 2ನೇ ನಿಯಮದ ಮೇರೆಗೆ ತಮ್ಮ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಲು ಇಚ್ಛಿಸುವ ವ್ಯಕ್ತಿಗಳು, ತಮ್ಮ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡುವಂತೆ ಕೋರಿ ತಮ್ಮನ್ನು ನೇಮಕ ಮಾಡಿದ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದು.

(2) (1)ನೇ ಉಪನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ನೇಮಕ ಪ್ರಾಧಿಕಾರಿಯು, ಅರ್ಜಿದಾರನು ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಲು ಹಕ್ಕನ್ನು ಹೊಂದಿದ್ದಾನೆಂದು ಮನವಿರಿಕೆಯಾದರೆ, ಕೋರಿಕೆಯನ್ನು ಮಂಜೂರು ಮಾಡುವ ಆದೇಶಗಳನ್ನು ಹೊರಡಿಸಬಹುದು.

**4. ಅನುಮತಿಯನ್ನು ಒಂದೇ ಒಂದು ಬಾರಿ ನೀಡಲಾಗುವುದು.-** ಯಾವನೇ ಸರ್ಕಾರಿ ನೌಕರನಿಗೆ 2ನೇ ನಿಯಮದ ಮೇರೆಗೆ ತನ್ನ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಲು ಒಂದಕ್ಕಿಂತ ಹೆಚ್ಚು ಬಾರಿ ಅನುಮತಿ ನೀಡತಕ್ಕುದಲ್ಲ.

** **ಉದ್ಯೋಗಿ ವೃಂದ ಬದಲಾವಣೆ ಪರಿಣಾಮ:-5.** (1) 1957ರ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳಲ್ಲಿ ಅಥವಾ ಇತರ ಯಾವುದೇ ನಿಯಮಗಳಲ್ಲಿ ಏನೇ ಇದ್ದರೂ ಮತ್ತು (2)ನೇ ಉಪನಿಯಮದಲ್ಲಿ ಉಪಬಂಧಿಸಿರುವಂತೆ ಹೊರತು, 2ನೇ ನಿಯಮದ ಮೇರೆಗೆ ತನ್ನ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಲು ಅನುಮತಿ ಪಡೆದಿರುವ ವ್ಯಕ್ತಿಯು ರಜೆ, ನಿವೃತ್ತಿ ವೇತನ ಮತ್ತು ಜೇಷ್ಠತೆಯ ಉದ್ದೇಶಗಳಿಗಾಗಿ ತನ್ನ ಹಿಂದಿನ ಸೇವಾವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಹಕ್ಕನ್ನು ಹೊಂದಿರತಕ್ಕುದು.

ಪರಂತು,

(ಎ) ಅವನು ಸ್ಥಳೀಯ ಅಭ್ಯರ್ಥಿಯಾಗಿ ಸಲ್ಲಿಸಿದ ತನ್ನ ಹಿಂದಿನ ಸೇವೆಯನ್ನು ಜೇಷ್ಠತೆಗೆ ಲೆಕ್ಕಕ್ಕೆ ತೆಗೆದುಕೊಳ್ಳಲು ಹಕ್ಕನ್ನು ಹೊಂದಿರತಕ್ಕುದಲ್ಲ ಮತ್ತು

(ಬಿ) (1956)ರ ರಾಜ್ಯಗಳ ಪುನಸ್ಸಂಘಟನಾ ಅಧಿನಿಯಮದ ಮೇರೆಗೆ ಹಂಚಿಕೆ ದಾರನಲ್ಲದ) ಕಿರಿಯ ಸಹಾಯಕ ಅಥವಾ ದ್ವಿತೀಯ ದರ್ಜೆ ಗುಮಾಸ್ತನಾಗಿ ತನ್ನ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಿಕೊಂಡಿರುವ ಬೆರಳಚ್ಚುಗಾರನ ಸಂದರ್ಭದಲ್ಲಿ ಹೆಚ್ಚಿನ ಎರಡು ವರ್ಷಗಳ ಅವಧಿಯನ್ನು ಬದಲಾವಣೆ ಹೊಂದಿದ ಉದ್ಯೋಗಿ ವೃಂದದಲ್ಲಿ ಜೇಷ್ಠತೆಯ ಉದ್ದೇಶಕ್ಕಾಗಿ ಹಿಂದಿನ ಸೇವೆಯಿಂದ ಹೊರತುಪಡಿಸತಕ್ಕುದು.

(2) 2ನೇ ನಿಯಮದ ಮೇರೆಗೆ ತನ್ನ ಉದ್ಯೋಗಿ ವೃಂದವನ್ನು ಬದಲಾವಣೆ ಮಾಡಿಕೊಳ್ಳಲು ಅನುಮತಿ ಹೊಂದಿದ ಒಬ್ಬ ವ್ಯಕ್ತಿಯನ್ನು ಬದಲಾವಣೆ ಹೊಂದಿದ ಉದ್ಯೋಗಿ ವೃಂದದಲ್ಲಿ ಕಡೇ ಪಕ್ಷ ಒಂದು ವರ್ಷ ಸೇವೆ ಸಲ್ಲಿಸಿದ್ದ ಹೊರತು ಬಡ್ತಿಗೆ ಪರಿಗಣಿಸತಕ್ಕುದಲ್ಲ ಮತ್ತು ಅವನು ಬಡ್ತಿಗೆ ಅರ್ಹನಾಗುವುದಕ್ಕೆ ಮುಂಚೆ ಬಡ್ತಿ ಹೊಂದಿದ ವ್ಯಕ್ತಿಗಳ ಮೇಲೆ ಜೇಷ್ಠತೆಯನ್ನು ಕ್ಲೇಮು ಮಾಡಲು ಅಥವಾ ಮುಂದಿನ ಉನ್ನತ ಹುದ್ದೆಗೆ ಬಡ್ತಿ ಹೊಂದಲು ಯಾವುದೇ ಕ್ಲೇಮನ್ನು ಹೊಂದಿರತಕ್ಕುದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,

(ಸೈಯದ್ ಜಹಾರುದ್ದೀನ್ ಹಸ್ಸಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾಮಾನ್ಯಾಡಳಿತ ಇಲಾಖೆ(ಒ ಮತ್ತು ಎಂ)

* ಅಧಿಸೂಚನೆ ಸಂಖ್ಯೆ ಡಿಪಿಎಆರ್ 65 ಎಸ್.ಸಿ.ಆರ್ 81, ದಿ:01.10.1982

** ಅಧಿಸೂಚನೆ ಸಂಖ್ಯೆ ಡಿಪಿಎಆರ್ 42 ಎಸ್.ಸಿ.ಆರ್ 85, ದಿನಾಂಕ 12.09.86